ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ - ಎಲ್ಲರೂ ಬೆಳೆಯೋಣ

**ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ ಸರ್ಕಾರ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು**
**ನೃಪತುಂಗ ರಸ್ತೆ, ಬೆಂಗಳೂರು – 01**

ಸಂಖ್ಯೆ : ಸಶಿಅ/ಸ.ಶಿ/ಸು/01/2010 – 11

ದಿನಾಂಕ: 04.6.2010

**ಸುತ್ತೋಲೆ**

ವಿಷಯ : ಜಿಲ್ಲಾ ಹಾಗೂ ಬ್ಲಾಕ್ ಹಂತದಲ್ಲಿ ಆವಿಷ್ಕೃತ-ಅಲ್ಪಸಂಖ್ಯಾತ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಮಾರ್ಗಸೂಚಿ.

ಉಲ್ಲೇಖ : ದಿನಾಂಕ 26.04.2010 ರಂದು ನವದೆಹಲಿಯಲ್ಲಿ ನಡೆದ **AWP**ಮತ್ತು **B** ಸಭೆಯ ಶಿಫಾರಸ್ಸುಗಳು

*****

2010 – 11 ನೇ ಸಾಲಿಗೆ ಸಿದ್ಧಪಡಿಸಿ ಸಲ್ಲಿಸಿದ್ದ ಕಾರ್ಯಯೋಜನೆ ಆಯವ್ಯಯದ ಆಧಾರದ ಮೇಲೆ PAB (Project Approval Board) ನಿಂದ ಅಲ್ಪಸಂಖ್ಯಾತ ಸಮುದಾಯದ ಮಕ್ಕಳ ಶಿಕ್ಷಣಕ್ಕಾಗಿ, ನಾವೀನ್ಯಯುತ ಚಟುವಟಿಕೆಯಡಿಯಲ್ಲಿ ಪ್ರತೀ ಜಿಲ್ಲೆಗೆ ರೂ 7.5 ಲಕ್ಷದಂತೆ ಒಟ್ಟು ರೂ 225.00 ಲಕ್ಷ ಅನುಮೋದನೆಯಾಗಿರುತ್ತದೆ. 2009-10 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ಚಟುವಟಿಕೆಗಳನ್ನೇ ವಿನೂತನವಾಗಿ ಈ ಬಾರಿಯೂ ಮುಂದುವರಿಸಲು ಯೋಜಿಸಲಾಗಿದೆ. ಚಟುವಟಿಕೆವಾರು ಅನುಮೋದನೆಯಾಗಿರುವ ಪ್ರತಿಯನ್ನು ಇದರೊಂದಿಗೆ ಅನುಬಂಧಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲಿನ ಅನುದಾನ ಬಿಡುಗಡೆಗನುಗುಣವಾಗಿ ಅಲ್ಪಸಂಖ್ಯಾತ ನಾವೀನ್ಯಯುತ ಚಟುವಟಿಕೆಗಳನ್ನು (Innovative Activities for Minority Community) ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಮಾರ್ಗಸೂಚಿಯನ್ನು ನೀಡಿದ್ದು, ಅದನ್ನು ಅನುಸರಿಸಲು ಸೂಚಿಸಿದೆ. ಪ್ರಸ್ತುತ ಮಾರ್ಗಸೂಚಿ ನಮ್ಯವಾಗಿದ್ದು, **ಸ್ಥಳೀಯ ಅಗತ್ಯತೆಗೆ ತಕ್ಕಂತೆ ಅದರ ಮೂಲ ಆಶಯಗಳಿಗೆ ಭಂಗ ಬಾರದಂತೆ ಮಾರ್ಪಡಿಸಿಕೊಳ್ಳಬಹುದು.** ಹೆಣ್ಣು ಮಕ್ಕಳಿಗೆ ಜಾಗೃತಿ ಶಿಬಿರಕ್ಕೆ ಮಂಜೂರಾಗಿರುವ ಅನುದಾನವನ್ನು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಸುತ್ತೋಲೆಯಲ್ಲಿ ಹೊರಡಿಸಲಾಗಿದೆ ಅದರಂತೆ ಕ್ರಮ ಮಾಡುವುದು.

ಕೆಳಕಂಡ ಅನುಮೋದನೆಯಾಗಿರುವ ಚಟುವಟಿಕೆಗಳನ್ನು ಮಾರ್ಗಸೂಚಿಯಂತೆ ನಿರ್ವಹಿಸುವುದು.

**1. ಮುಸ್ಲಿಂ ಧಾರ್ಮಿಕ ಹಾಗೂ ಸಮುದಾಯದ ಮುಖಂಡರಿಗೆ ಜಾಗೃತಿ ಶಿಬಿರ :**

ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯವು ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಸಮುದಾಯವಾಗಿದ್ದು, ಮುಸ್ಲಿಂ ಸಮುದಾಯದ ಅನೇಕ ಮಕ್ಕಳು ಔಪಚಾರಿಕ ಶಿಕ್ಷಣದಿಂದ (Formal Education) ವಂಚಿತರಾಗಿದ್ದಾರೆ. ಈ ಮಕ್ಕಳನ್ನು ಶಿಕ್ಷಣದ ಮುಖ್ಯವಾಹಿನಿಗೆ ತರಲು ಮುಸ್ಲಿಂ ಧಾರ್ಮಿಕ ಹಾಗೂ ಸಮುದಾಯದ ಮುಖಂಡರಿಗೆ ಔಪಚಾರಿಕ ಶಿಕ್ಷಣದ ಮಹತ್ವದ ಬಗ್ಗೆ ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ ಪ್ರತೀ ಬ್ಲಾಕಿನಲ್ಲಿ 65 ಜನ ಧಾರ್ಮಿಕ ಹಾಗೂ ಸಮುದಾಯದ ಮುಖಂಡರುಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಮುಖಂಡರುಗಳನ್ನೊಳಗೊಂಡ 1 ದಿನದ ಜಾಗೃತಿ ಶಿಬಿರವನ್ನು ಜೂನ್ 2010 ರೊಳಗೆ ಏರ್ಪಡಿಸುವುದು. ಕಳೆದ ವರ್ಷ ನಡೆದ ಜಾಗೃತಿ ಶಿಬಿರಗಳಲ್ಲಿ ಭಾಗವಹಿಸದೆ ಇರುವವರಿಗೆ ಆದ್ಯತೆ ನೀಡುವುದು.

ಸಮುದಾಯದ ಮುಖಂಡರ ಹಾಗೂ ಪೋಷಕರ ಜಾಗೃತಿ ಶಿಬಿರಗಳಲ್ಲಿ ಜಿಲ್ಲಾ ಹಾಗೂ ಬ್ಲಾಕ್ ಮಟ್ಟದ ಅಧಿಕಾರಿಗಳು ಆರ್.ಟಿ.ಇ 2009 ಅಡಿಯಲ್ಲಿ ಶಿಕ್ಷಣದ ಮಹತ್ವ ಹಾಗೂ ಇಲಾಖೆಯ ಪ್ರೋತ್ಸಾಹದಾಯಕ ಕಾರ್ಯಕ್ರಮಗಳ ಕುರಿತು ಮಾಹಿತಿಗಳನ್ನು ನೀಡಿ ಪೋಷಕರ ಹಾಗೂ ಸಮುದಾಯದ ಜವಾಬ್ದಾರಿ ಬಗ್ಗೆ ಅರಿವು ಮೂಡಿಸುವುದು. ಈ ನಿಟ್ಟಿನಲ್ಲಿ ಜಾಗೃತಿ ಶಿಬಿರಗಳಲ್ಲಿ ಪಿ.ಪಿ.ಟಿ ಮೂಲಕ ಸ್ಲೈಡ್ ಪ್ರದರ್ಶನ, ಪತ್ರಿಕಾ ಕ್ಲಿಪಿಂಗ್ಸ್, ಶಿಕ್ಷಣದ ಮಹತ್ವ ತೋರಿಸುವ ಭಾವಚಿತ್ರಗಳು ಹಾಗೂ ಯಶೋಗಾಥೆಗಳನ್ನು ಖಡ್ಡಾಯವಾಗಿ ಪ್ರದರ್ಶಿಸಿ ಚರ್ಚಿಸಿ ವಿಚಾರ ವಿನಿಮಯ ಮಾಡಿಕೊಳ್ಳಬೇಕು.

ಮದರಸಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಔಪಚಾರಿಕ ಶಿಕ್ಷಣಕ್ಕೆ ಒಳಪಡಿಸುವಂತೆ ಪ್ರೇರೇಪಿಸುವುದು.

ಕೆ.ಜಿ.ಬಿ.ವಿ ಅಡಿಯಲ್ಲಿ 02 ಶಾಲೆಗಳು ಪ್ರತ್ಯೇಕವಾಗಿ ಅಲ್ಪ ಸಂಖ್ಯಾತ ಸಮುದಾಯದ ಮಕ್ಕಳಿಗೆ ಪ್ರಾರಂಭಿಸಲಾಗಿದ್ದು, ಈ ಸೌಲಭ್ಯವನ್ನು ಸಮುದಾಯದ ಅರ್ಹ ಹೆಣ್ಣು ಮಕ್ಕಳು ಪಡೆದುಕೊಳ್ಳಬಹುದೆಂಬ ಮಾಹಿತಿಯನ್ನು ಪೋಷಕರಿಗೆ ನೀಡಬೇಕು.

ಸಮುದಾಯದ ಮಕ್ಕಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಗಂಡು ಮಕ್ಕಳು ಬಾಲ ಕಾರ್ಮಿಕರಾಗಿ ಶಾಲೆಯನ್ನು ತೊರೆಯುತ್ತಿರುವುದು ವಿಷಾದನೀಯ ಸಂಗತಿಯಾಗಿರುತ್ತದೆ. ಇದನ್ನು ತಡೆಗಟ್ಟಲು ಇಲಾಖೆಯಿಂದ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳ ಬಗ್ಗೆ ಪೋಷಕರಿಗೆ ಪರಿಚಯಿಸಿ ತಮ್ಮ ಮಕ್ಕಳನ್ನು ಶಾಲೆಗೆ ನಿರಂತರವಾಗಿ ಹಾಜರಾಗುವಂತೆ ನೋಡಿಕೊಳ್ಳುವ ಬಗ್ಗೆ ಪ್ರೇರೇಪಿಸುವುದು.

ಸಮೂಹ ಮಾಧ್ಯಮದ ಮೂಲಕ ವಿಶೇಷವಾಗಿ ಸ್ಥಳೀಯ ಪತ್ರಿಕೆಗಳು, ಉರ್ದು ಮಾಧ್ಯಮದ ಪತ್ರಿಕೆಗಳ ಮೂಲಕ ಮೇಲಿನ ಎಲ್ಲಾ ಅಂಶಗಳನ್ನು ಹಾಗೂ ಆರ್.ಟಿ.ಇ-2009ರ ಅಡಿಯಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು.

ಇದರ ಫಲಶೃತಿಯನ್ನು ತಿಳಿಯಲು ಸೆಪ್ಟಂಬರ್/ಅಕ್ಟೋಬರ್‌ನಲ್ಲಿ ಅದೇ ಶಿಬಿರಾರ್ಥಿಗಳಿಗೆ ಮತ್ತೊಮ್ಮೆ ಶಿಬಿರ ಏರ್ಪಡಿಸುವುದು. ಈ ಶಿಬಿರಗಳನ್ನು ಸ್ಥಳೀಯ ಎನ್.ಜಿ.ಓಗಳ ಸಹಕಾರದೊಂದಿಗೆ ಸಂಘಟಿಸುವುದು. ತಲಾ ರೂ 75 ರಂತೆ ವೆಚ್ಚ ಭರಿಸುವುದು. (ಪ್ರಯಾಣ ಭತ್ಯೆ, ಟೀ/ಕಾಫೀ, ಊಟ) ಸ್ಥಳೀಯವಾಗಿ ಬೇಕಾಗುವ ಸಾಹಿತ್ಯವನ್ನು ಸಂಪನ್ಮೂಲ ವ್ಯಕ್ತಿಗಳಿಂದ ತಯಾರಿಸಿಕೊಳ್ಳುವುದು.

**2. ಮುಸ್ಲಿಂ ಮಕ್ಕಳ ಪಾಲಕ ಪೋಷಕರಿಗೆ ಜಾಗೃತಿ ಶಿಬಿರಗಳು :**

ಮುಸ್ಲಿಂ ಮಕ್ಕಳ ಪಾಲಕ ಪೋಷಕರಲ್ಲಿ ಔಪಚಾರಿಕ ಶಿಕ್ಷಣದ ಮಹತ್ವದ ಅರಿವಿಲ್ಲದೇ, ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಅರ್ಧದಲ್ಲೇ ಶಾಲೆಯನ್ನು ತೊರೆಯುತ್ತಿದ್ದಾರೆ. ಆ ಪ್ರಯುಕ್ತ ಮಕ್ಕಳ ಪಾಲಕ ಪೋಷಕರಲ್ಲಿ ಶಿಕ್ಷಣದ ಮಹತ್ವದ ಅರಿವನ್ನುಂಟುಮಾಡಿ ಮಕ್ಕಳು ಶಿಕ್ಷಣವನ್ನು ಪೂರೈಸಲು ಅನುಕೂಲಮಾಡಿಕೊಡುವಂತೆ ಶಿಕ್ಷಣದ ಮಹತ್ವವನ್ನು ತಿಳಿಸಲು ಮುಸ್ಲಿಂ ಮಕ್ಕಳ ತಂದೆತಾಯಂದಿರಿಗೆ ಪ್ರತ್ಯೇಕವಾಗಿ ಜಾಗೃತಿ ಶಿಬಿರಗಳನ್ನು, ಪ್ರತೀ ಶಿಬಿರದಲ್ಲಿ 65 ಜನ ಭಾಗವಹಿಸುವಂತೆ ಒಟ್ಟು 260 ಮಂದಿ ಪೋಷಕರಿಗೆ 4 ತಂಡಗಳಲ್ಲಿ ಶಿಬಿರಗಳನ್ನು ಜುಲೈ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಆಯೋಜಿಸುವುದು. ಘಟಕ ವೆಚ್ಚ ರೂ.75 ರಲ್ಲಿ ಭಿತ್ತಿ ಪತ್ರ, ಪ್ರಯಾಣ ಭತ್ಯೆ, ಊಟ ಟೀ/ಕಾಫಿ ಇತ್ಯಾದಿಗಳ ವೆಚ್ಚ ಭರಿಸುವುದು.

ಈ ಶಿಬಿರದ ಫಲಾನುಭವಿಗಳಾಗಿ - ಶಾಲೆತೊರೆಯುವ ಸಂಭಾವ್ಯತೆ (Potential Dropout) ಇರುವ ಮಕ್ಕಳ ಪೋಷಕರನ್ನು ಆಯ್ಕೆ ಮಾಡಿಕೊಳ್ಳುವುದು. ಭಾಗವಹಿಸುವಿಕೆ ಮಾದರಿಯಲ್ಲಿ ಶಿಬಿರವನ್ನು ಏರ್ಪಡಿಸಿ, ಔಪಚಾರಿಕ ಶಿಕ್ಷಣದ ಮಹತ್ವದ ಕುರಿತು ಪೋಷಕರ ಜವಾಬ್ದಾರಿಯ ಬಗ್ಗೆ ಅರಿವು ಮೂಡಿಸುವುದು.

**3. ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತ ಮಕ್ಕಳಿಗೆ ಬ್ಲಾಕ್ ಮಟ್ಟದಲ್ಲಿ ವಿಚಾರಗೋಷ್ಠಿ :**

ಬ್ಲಾಕ್ ಮಟ್ಟದಲ್ಲಿ ಶೈಕ್ಷಣಿಕವಾಗಿ ಹಿಂದುಳಿದಿರುವ 7ನೇ ತರಗತಿಯ ಅಲ್ಪಸಂಖ್ಯಾತ ಮಕ್ಕಳನ್ನು ಗುರುತಿಸಿ, ಪ್ರತೀ ಬ್ಲಾಕಿನ 100ಜನ ಮಕ್ಕಳನ್ನೊಳಗೊಂಡಂತೆ ವಿಜ್ಞಾನ ಹಾಗೂ ತಂತ್ರಜ್ಞಾನವಿಷಯದಲ್ಲಿ ಒಂದು ದಿನದ ವಿಚಾರಗೋಷ್ಠಿಯನ್ನು ಹಮ್ಮಿಕೊಳ್ಳುವುದು. ವಿಚಾರಗೋಷ್ಠಿಯನ್ನುಪ್ರತೀ ತಂಡದಲ್ಲಿ 50ಮಕ್ಕಳಂತೆ 2ತಂಡಗಳಲ್ಲಿ ಸಂಘಟಿಸುವುದು. ಸೆಮಿನಾರ್‌ನಲ್ಲಿ ವಿಷಯಗಳನ್ನು ಮಂಡಿಸಲು, ದಿನಾಂಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಎರಡು ವಿಷಯಗಳನ್ನು ಮುಂಚಿತವಾಗಿಯೇ ಮಕ್ಕಳಿಗೆ ನೀಡುವುದು. ಸೆಮಿನಾರ್ ದಿನ ಪ್ರತಿ ವಿಷಯದಲ್ಲಿ ಕೆಲವು ಮಕ್ಕಳಿಂದ ಮಂಡನೆ ಚರ್ಚೆ ಏರ್ಪಡಿಸುವುದು. ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಗಳನ್ನು ಕರೆದು ಅವರಿಂದಲೂ ವಿಷಯ ಮಂಡನೆ ಹಾಗೂ ಚರ್ಚೆ ಏರ್ಪಡಿಸುವುದು. ಈ ಸಂಬಂಧ ಪ್ರತೀ ಮಗುವಿಗೆ ರೂ 100 ರಂತೆ ಖರ್ಚು ಭರಿಸುವುದು. ಮಕ್ಕಳು, ಅಧ್ಯಾಪಕರು, ಸಂಪನ್ಮೂಲ ವ್ಯಕ್ತಿಗಳು ಬಂದು ಹೋಗುವ ಪ್ರಯಾಣ ವೆಚ್ಚ, ಊಟ, ಕಾಫೀ/ಟೀ ವ್ಯವಸ್ಥೆ ಮತ್ತು ಶಿಬಿರದ ಸಂಘಟನೆಯ ಸಾದಿಲ್ವಾರಿಗೆ ಈ ಹಣವನ್ನು ವೆಚ್ಚ ಮಾಡುವುದು. ಈ ಚಟುವಟಿಕೆಯ ಅನುಷ್ಠಾನಕ್ಕಾಗಿ ಒಬ್ಬ ನೋಡಲ್ ಅಧಿಕಾರಿಯನ್ನು ಬ್ಲಾಕ್ ಹಂತದಲ್ಲಿ ನಿಯೋಜಿಸಿಕೊಳ್ಳುವುದು.

**4. ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತ ಮಕ್ಕಳಿಗೆ ಬ್ಲಾಕ್ ಹಂತದ ಮೇಳಗಳು :**

ಅಲ್ಪಸಂಖ್ಯಾತ ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವನೆಯನ್ನು ಬೆಳೆಸುವ ದೃಷ್ಠಿಯಿಂದ ಬ್ಲಾಕ್ ಹಂತದಲ್ಲಿ ಈ ಕೆಳಗಿನ ಮೇಳಗಳನ್ನು ಆಯೋಜಿಸುವುದು.

1. ಸಾಹಿತ್ಯ ಮೇಳ
2. ವಿಜ್ಞಾನ ಮೇಳ

ಮೊದಲನೆ ಸೆಮಿಸ್ಟರ್‌ನಲ್ಲಿ ಸಾಹಿತ್ಯ ಮೇಳವನ್ನು, ಎರಡನೇ ಸೆಮಿಸ್ಟರ್‌ನಲ್ಲಿ ವಿಜ್ಞಾನ ಮೇಳವನ್ನು ಆಯೋಜಿಸುವುದು. ಪ್ರತೀ ಮೇಳದಲ್ಲಿ ಕನಿಷ್ಠ 100 ಮಕ್ಕಳು ಭಾಗವಹಿಸುವಂತೆ ನೋಡಿಕೊಳ್ಳುವುದು.

ಪ್ರತಿ ಮೇಳಕ್ಕೆ ರೂ 10,000/- ಖರ್ಚುಮಾಡಬಹುದಾಗಿದ್ದು, ಈ ಮೊತ್ತದಿಂದ ಊಟ, ಬಹುಮಾನ, ತೀರ್ಪುಗಾರರ ಗೌರವಧನ, ಪ್ರಮಾಣಪತ್ರ, ಮಕ್ಕಳು ಬರುವ, ಹೋಗುವ ಖರ್ಚು ಇತ್ಯಾದಿಗಳನ್ನು ಭರಿಸಬಹುದಾಗಿದೆ. (ಕಿರಿಯ ಪ್ರಾಥಮಿಕ ಶಾಲಾ ಹಾಗೂ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಸ್ಪರ್ಧೆಗಳನ್ನು ಪ್ರತ್ಯೇಕವಾಗಿ ಆಯೋಜಿಸುವುದು). ಸಾಹಿತ್ಯ ಮೇಳದಲ್ಲಿ ಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಆಶುಭಾಷಣ ಸ್ಪರ್ಧೆ ಇತ್ಯಾದಿಗಳನ್ನು ಏರ್ಪಡಿಸುವುದು. ವಿಜ್ಞಾನ ಮೇಳದಲ್ಲಿ ಮಕ್ಕಳು ರಚಿಸಿದಂತಹ ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸುವುದು ಹಾಗೂ ಪ್ರಯೋಗಗಳನ್ನು ಮಾಡಿಸುವುದು, ಸಂಶೋದಕರು ಮತ್ತು ಸಂಶೋದನೆಯ ಕುರಿತು ಚರ್ಚೆ ಇತ್ಯಾದಿ.

**5. ಜಿಲ್ಲಾ ಮಟ್ಟದಲ್ಲಿ ಉರ್ದು ಶಿಕ್ಷಕರಿಗೆ ಮೂರು ದಿನಗಳ ವಿಚಾರಗೋಷ್ಠಿ :**

ಉರ್ದು ಭಾಷೆಯನ್ನು ಬೋಧಿಸುತ್ತಿರುವ ಜಿಲ್ಲೆಯ 50 ಶಿಕ್ಷಕರಿಗೆ ಉರ್ದು ಭಾಷೆ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದಂತೆ 3 ದಿನಗಳ ಸೆಮಿನಾರ್‌ನ್ನು ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳುವುದು. ಈ ವಿಚಾರಗೋಷ್ಠಿಯಲ್ಲಿ ಶಿಕ್ಷಣದ ಮಹತ್ವ, ಅಲ್ಪಸಂಖ್ಯಾತ ಸಮುದಾಯವು ಎದುರಿಸುತ್ತಿರುವ ಸಮಸ್ಯೆಗಳು, ವ್ಯಕ್ತಿವಿಕಸನದ ಅಂಶಗಳು, ಸಮುದಾಯದ ಪಾತ್ರ ಇತ್ಯಾದಿಗಳ ಬಗ್ಗೆ ಉಪನ್ಯಾಸ, ಚರ್ಚೆ ಏರ್ಪಡಿಸುವುದು. ಸೆಮಿನಾರ್ ನಂತರ ವಿಚಾರಗೋಷ್ಠಿಯಿಂದ ಪಡೆದ ಮಾಹಿತಿಯನ್ನು ಶಿಕ್ಷಕರ ಸಮಾಲೋಚನ ಸಭೆಗಳಲ್ಲಿ ವಿನಿಮಯ ಮಾಡಿಕೊಳ್ಳುವುದು ಹಾಗೂ ಸಮುದಾಯದವರಿಗೆ ಫಲಪ್ರದವಾಗುವಂತೆ ಕಾರ್ಯೋನ್ಮುಖರಾಗುವುದು. ನಿಗಧಿತ ಪ್ರಯಾಣ ಭತ್ಯೆ, ದಿನಭತ್ಯೆ, ಊಟ, ಕಾಫೀ/ಟೀ ಇತ್ಯಾದಿ ಖರ್ಚುಗಳಿಗೆ ಪ್ರತಿ ಶಿಕ್ಷಕರಿಗೆ ಘಟಕ ವೆಚ್ಚ ರೂ.100 ರಂತೆ ಭರಿಸುವುದು. ಈ ಮಿತಿಯೊಳಗೆ ಸಂಪನ್ಮೂಲ ವ್ಯಕ್ತಿಗಳಿಗೆ ದಿನಭತ್ಯೆ, ಪ್ರಯಾಣಭತ್ಯೆಯೊಂದಿಗೆ ಸಂಭಾವನೆಯನ್ನೂ ಭರಿಸುವುದು.

**6. ಹೈಕ್ಸ್ ಹಾಗೂ ಕ್ಷೇತ್ರ ಅಧ್ಯಯನ ಭೇಟಿ :**

ಪ್ರತೀ ಶೈಕ್ಷಣಿಕ ವಲಯದಿಂದ 6ನೇ ಮತ್ತು 7ನೇ ತರಗತಿಯ 50 ಅಲ್ಪಸಂಖ್ಯಾತ ಮಕ್ಕಳನ್ನು ಬ್ಲಾಕ್‌ವಾರು ಗುರುತಿಸಿ, ಅವರಿಗೆ ಹತ್ತಿರದ ಐತಿಹಾಸಿಕ, ಸಾಹಿತ್ಯಕ, ವೈಜ್ಞಾನಿಕ, ಶೈಕ್ಷಣಿಕ ಕ್ಷೇತ್ರ ಅಧ್ಯಯನ ಭೇಟಿಗಾಗಿ ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡುವುದು. ಕ್ಷೇತ್ರ ಅಧ್ಯಯನ ಭೇಟಿ ಮಾಡುವ ಸ್ಥಳದ ಬಗ್ಗೆ ಮೊದಲೇ ಮಾಹಿತಿ ತಿಳಿದುಕೊಂಡಿರಬೇಕು. ಉದಾ: ಭೇಟಿ ಮಾಡಲಿರುವ ಸ್ಥಳ ಯಾವ ಜಿಲ್ಲೆಯಲ್ಲಿದೆ; ಭೌಗೋಳಿಕ ಅಂಶಗಳು, ಆಳಿದ ರಾಜರು, ಜಾಗದ ಮಹತ್ವ ಇತ್ಯಾದಿ ಮಾಹಿತಿಯನ್ನು ಮೊದಲೇ ಮಕ್ಕಳಿಗೆ ಒದಗಿಸಬೇಕು. (ಪ್ರಶ್ನಾವಳಿಯನ್ನು ತಯಾರಿಸುವುದು ಒಳ್ಳೆಯದು). ಆ ಕ್ಷೇತ್ರಕ್ಕೆ ಪ್ರವಾಸ ಕೈಗೊಂಡ ನಂತರ ಮಕ್ಕಳು ಗಮನಿಸಿದ ಅಂಶಗಳ ಅನುಭವದ ಹಿನ್ನೆಲೆಯನ್ನು ವರದಿಯ ಮೂಲಕ ಶಾಲಾ ಹಂತದಲ್ಲಿ ಪರಸ್ಪರ ಅನುಭವ ಹಂಚಿಕೆ ಮಾಡಿಕೊಳ್ಳಲು ವ್ಯವಸ್ಥೆ ಮಾಡುವುದು, ಈ ಬಗ್ಗೆ ವರದಿಯನ್ನು ರಾಜ್ಯ ಕಛೇರಿಗೆ ಸಲ್ಲಿಸುವುದು ಹೋಗಿ ಬರುವ ಖರ್ಚು, ಊಟದ ಖರ್ಚು ಇತ್ಯಾದಿಗಳನ್ನು ಅನುಮೋದನೆಯಾಗಿರುವ ರೂ.10,000 ಗಳನ್ನು ಬಳಸುವುದು. ಉಳಿತಾಯವಾಗುವ ಹಣದಲ್ಲಿ ಹೆಚ್ಚು ಸಂಖ್ಯೆಯ ವಿದಾರ್ಥಿಗಳನ್ನು ಪ್ರವಾಸಕ್ಕೆ ಕರೆದೊಯ್ಯಬಹುದು. ಪ್ರವಾಸಕ್ಕಾಗಿ ಬ್ಲಾಕಿಗೆ ಒಬ್ಬ ನೋಡೆಲ್ ಅಧಿಕಾರಿಯನ್ನು ನೇಮಕಮಾಡುವುದು.

**7. ಲರ್ನಿಂಗ್ ಕಾರ್ನರ್ಸ್ :**

ಪ್ರತೀ ಜಿಲ್ಲೆಗೆ 1.40 ಲಕ್ಷ ಲರ್ನಿಂಗ್ ಕಾರ್ನರ್‌ಗೆ ಅನುಮೋದನೆಯಾಗಿದ್ದು, ಈ ಮೊತ್ತದಿಂದ ಉರ್ದು ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ (ಆಯ್ದ) ಜಿಲ್ಲಾ ಕಛೇರಿಯಿಂದ ನಿಯಮಾನುಸಾರ ಕೆಲವು ಗ್ರಂಥಾಲಯ ಪುಸ್ತಕಗಳನ್ನು ಒದಗಿಸಬಹುದಾಗಿದೆ. ಮಕ್ಕಳಲ್ಲಿ ಜ್ಞಾನವನ್ನು ವೃದ್ಧಿಸಲು ಹಾಗೂ ಓದುವ ಕೌಶಲ್ಯವನ್ನು ಬೆಳೆಸಲು ಸಹಕಾರಿಯಾಗುತ್ತದೆ. ವಾರದಲ್ಲಿ ಒಮ್ಮೆ ಓದಿದ ಪುಸ್ತಕದ ಬಗ್ಗೆ ಶಿಕ್ಷಕರು ಮಕ್ಕಳೊಂದಿಗೆ ಚರ್ಚಿಸುವುದು ಮತ್ತು ಸ್ವತಂತ್ರವಾಗಿ ಮಕ್ಕಳೇ ವಿಷಯಗಳನ್ನು ಮಂಡಿಸಲು ಅವಕಾಶ ಕಲ್ಪಿಸುವುದು. ಉದಾ: ಪುಸ್ತಕದ ಹೆಸರು, ಲೇಖಕರು, ಸಾರಾಂಶ ಇತ್ಯಾದಿ. ಗ್ರಂಥಾಲಯ ಪುಸ್ತಕಗಳ ಆಯ್ಕೆಯ ಬಗ್ಗೆ ಶಾಲಾಭಿವೃದ್ಧಿ ಸಮಿತಿಯ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿ ತೀರ್ಮಾನವನ್ನು ತೆಗೆದುಕೊಳ್ಳುವುದು.

**ಸೂಚನೆ : ಮೇಲೆ ನಮೂದಿಸಿರುವ ಬ್ಲಾಕ್ ಹಂತದ ಚಟುವಟಿಕೆಗಳನ್ನು ನಿಗಧಿತ 7.5 ಲಕ್ಷದಲ್ಲಿ ಪ್ರತೀ ಬ್ಲಾಕಿನಲ್ಲಿ ಆಯೋಜಿಸಲು ಸಾಧ್ಯವಾಗದ ಪಕ್ಷದಲ್ಲಿ ಕೆಲವು ಆಯ್ದ ಚಟುವಟಿಕೆಗಳನ್ನು ಎರಡು ಬ್ಲಾಕಿಗೆ ಒಂದರಂತೆ ಆಯೋಜಿಸಿ 7.5ಲಕ್ಷ ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ. ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳಿಗೆ-ಟಿ.ಎ/ಡಿ.ಎ ಜೊತೆಗೆ ಗರಿಷ್ಠ ರೂ 100/- ಸಂಭಾವನೆ ನೀಡಬಹುದು. ಸಂಭಾವನೆಯನ್ನು ಹಣಕಾಸಿನ ಮಿತಿಯನ್ನು ಗಮನಿಸಿ ನಿರ್ಧರಿಸಬಹುದು.**

**ಹೆಚ್ಚುವರಿ ಸೂಚನೆಗಳು**

- ಕೆಲವು ಜಿಲ್ಲೆಗಳಲ್ಲಿ ಬ್ಲಾಕ್‌ಗಳ ಸಂಖ್ಯೆ ಕಡಿಮೆಯಿದ್ದು, ಮೇಲಿನ ಎಲ್ಲಾ ಚಟುವಟಿಕೆಗಳನ್ನು ಆಯೋಜಿಸಿದ ನಂತರವೂ 7.5ಲಕ್ಷ ಮೊತ್ತದಲ್ಲಿ ಇನ್ನೂ ಹಣ ಉಳಿಯುವ ಸಾಧ್ಯತೆಯಿದೆ. ಅಂತಹ ಜಿಲ್ಲೆಗಳು ಈ ಕೆಳಗಿನ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ಚಟುವಟಿಕೆಗಳನ್ನು ಸಂಘಟಿಸಿ ಪೂರ್ಣ ಖರ್ಚು ಭರಿಸುವುದು. ಯಾವುದೇ ಕಾರಣಕ್ಕೂ ಅನುದಾನವನ್ನು ಉಳಿಸಬಾರದು.

- ಬಡತನ ರೇಖೆಗಿಂತ ಕೆಳಗಿರುವ 5 ಮತ್ತು 7 ನೇ ತರಗತಿಯ ಆಯ್ದ ಮಕ್ಕಳಿಗೆ (ಮುಸ್ಲಿಂ: ಕ್ರೈಸ್ತ: ಬೌದ್ಧ: ಸಿಖ್: ಜೈನ ಇತ್ಯಾದಿ) ನಿಘಂಟನ್ನು (ಇಂಗ್ಲೀಷ್-ಉರ್ದು/ಇಂಗ್ಲೀಷ್-ಕನ್ನಡ/ಇಂಗ್ಲೀಷ್-ಮರಾಠಿ/ಇಂಗ್ಲೀಷ್-ತೆಲಗು/ಇಂಗ್ಲೀಷ್-ತಮಿಳು) ಒದಗಿಸುವುದು. ಪ್ರತಿ ನಿಘಂಟಿಗೆ ತಲಾ ಗರಿಷ್ಠ ರೂ 70ನ್ನು ಖರ್ಚು ಮಾಡುವುದು.

- ಕೆಲವು ಆಯ್ದ ಉರ್ದು ಶಾಲೆಗಳಿಗೆ, ಶಾಲೆಗೆ ತಲಾ ರೂ 20,000/- ಮೊತ್ತದ ವಿಜ್ಞಾನ ಉಪಕರಣಗಳನ್ನು ಜಿಲ್ಲಾ ಹಂತದ ಖರೀದಿ ಸಮಿತಿ ಸರಬರಾಜು ಮಾಡುವುದು.

- ಕೊಡಗು ಜಿಲ್ಲೆಯವರು ಯೋಜಿಸಿದಂತೆ ಅಲ್ಪಸಂಖ್ಯಾತ ಮಕ್ಕಳಿಗೆ Rain Coats, Shoes ಮತ್ತು Jerkin ಗಳನ್ನು ನೀಡುವುದು. ಇದರಿಂದ ಮಕ್ಕಳ ದಾಖಲಾತಿ ಮತ್ತು ಹಾಜರಾತಿಯಲ್ಲಿ ಪ್ರಗತಿಯನ್ನು ಕಳೆದ ವರ್ಷದೊಂದಿಗೆ ಹೋಲಿಸಿದ ವರದಿಯನ್ನು ಈ ಕಛೇರಿಗೆ ಕಳುಹಿಸುವುದು.

ಈ ಸುತ್ತೋಲೆ ತಲುಪಿದ ಕೂಡಲೇ, ಭೌತಿಕ ಹಾಗೂ ಆರ್ಥಿಕ ಗುರಿ ಆಧಾರದ ಮೇಲೆ ಆಯಾ ಜಿಲ್ಲೆಗೆ ಸಂಬಂಧಿಸಿದಂತೆ ಪ್ರತೀ ತಿಂಗಳು ಜಿಲ್ಲೆಯಿಂದ ಬ್ಲಾಕ್‌ಗಳಿಗೆ ಹಣ ಬಿಡುಗಡೆ ಮಾಡಿದ ಮತ್ತು ಅದಕ್ಕನುಗುಣವಾಗಿ ಬ್ಲಾಕ್‌ಗಳಲ್ಲಿ ನಿಗಧಿತ ಚಟುವಟಿಕೆಗಳಿಗೆ ವೆಚ್ಚ ಮಾಡಿದ ವಿವರಗಳನ್ನು ಇದರೊಂದಿಗೆ ಲಗತ್ತಿಸಿರುವ ನಿಗಧಿತ ನಮೂನೆಗಳಲ್ಲಿ ( ನಮೂನೆ-ಎ ಮತ್ತು ಬಿ ) ಪ್ರತೀ ತಿಂಗಳು ತಪ್ಪದೇ ರಾಜ್ಯ ಕಛೇರಿಯ ಸಂಬಂಧಿಸಿದ (ಮೈನಾರಿಟಿ) ಶಾಖೆಗೆ ಸಲ್ಲಿಸುವುದು. ಇದರೊಂದಿಗೆ ಈ ಚಟುವಟಿಕೆಯಲ್ಲಿ ವಿಶೇಷ ಸಾಧನೆಯ ಯಶೋಗಾಥೆಗಳಿದ್ದರೆ, ದಾಖಲೀಕರಣದೊಂದಿಗೆ ತಪ್ಪದೇ ಕಛೇರಿಗೆ ವರದಿಮಾಡುವುದು.

**ವಿಶೇಷ ಸೂಚನೆ- 2009 ರ DISE ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ಅಲ್ಪಸಂಖ್ಯಾತ ಸಮುದಾಯದಲ್ಲಿ ಅದರಲ್ಲೂ ಮುಸ್ಲಿಂ ಸಮುದಾಯದಲ್ಲಿ ಬಾಲಕರ ಶಾಲಾ ದಾಖಲಾತಿ ಪ್ರಮಾಣ ಕಡಿಮೆಯಾಗುತ್ತಿರುವುದು ಕಂಡುಬಂದಿದೆ. ಈ ಬಗ್ಗೆ ತಮ್ಮ ಜಿಲ್ಲೆಯಲ್ಲಿ ಶಾಲಾವಾರು ಅಂಕಿ ಅಂಶಗಳನ್ನು ಪರಿಶೀಲಿಸುವುದು ಮತ್ತು ಈ ಸಮಸ್ಯೆಗೆ ಕಾರಣ ಪತ್ತೆ ಹಚ್ಚಿ ಪರಿಹಾರ ಕ್ರಮಗಳನ್ನು ಇಲಾಖಾ ಮಾರ್ಗದರ್ಶನದಂತೆ ಕೈಗೊಳ್ಳಲು ಕಾರ್ಯೋನ್ಮುಖರಾಗುವುದು.**

- ಪ್ರಗತಿ ವರದಿಯನ್ನು ನೀಡುವಾಗ ಭೌತಿಕ ಪ್ರಗತಿಯಲ್ಲಿ ಭಾಗವಹಿಸಿದವರ ಸಂಖ್ಯೆಯನ್ನು/ ಶಾಲೆಗಳ ಸಂಖ್ಯೆ ನಮೂದಿಸುವುದು. ( ಕ್ರ.ಸಂ.1-7 ಮತ್ತು 9.1 ) ಉಳಿದ ಅಂಶಗಳಿಗೆ ಶಾಲೆಗಳ ಸಂಖ್ಯೆ ನಮೂದಿಸುವುದು.

ಚಟುವಟಿಕೆಗಳನ್ನು ಈ ಕೆಳಕಂಡಂತೆ ನಿಗದಿಪಡಿಸಿದ ಮಾಹೆಗಳಲ್ಲಿ ನಡೆಸಲು ಸೂಚಿಸಿದೆ.

| ಕ್ರ.ಸಂ | ಚಟುವಟಿಕೆ | ನಡೆಸಬೇಕಾದ ತಿಂಗಳು |
|---|---|---|
| 1. | ಮುಸ್ಲಿಂ ಧಾರ್ಮಿಕ ಹಾಗೂ ಸಮುದಾಯದ ಮುಖಂಡರಿಗೆ ಜಾಗೃತಿ ಶಿಬಿರ | ಜುಲೈ ಮತ್ತು ಡಿಸೆಂಬರ್ 2010 |
| 2. | ಮುಸ್ಲಿಂ ಮಕ್ಕಳ ತಾಯಂದಿರಿಗೆ ಜಾಗೃತಿ ಶಿಬಿರಗಳು | ಜೂನ್, ನವೆಂಬರ್ 2010 |
| 3. | ಮುಸ್ಲಿಂ ಮಕ್ಕಳ ತಂದೆಯವರಿಗೆ ಜಾಗೃತಿ ಶಿಬಿರಗಳು | ಜೂನ್, ನವೆಂಬರ್ 2010 |
| 4. | ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತ ಮಕ್ಕಳಿಗೆ ಬ್ಲಾಕ್ ಮಟ್ಟದಲ್ಲಿ ವಿಚಾರಗೋಷ್ಠಿ | ನವೆಂಬರ್ 2010 |
| 5. | ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತ ಮಕ್ಕಳಿಗೆ ಬ್ಲಾಕ್ ಮಟ್ಟದಲ್ಲಿ ಮೇಳಗಳು | ಆಗಸ್ಟ್, ಡಿಸೆಂಬರ್ 2010 |
| 6. | ಜಿಲ್ಲಾ ಮಟ್ಟದಲ್ಲಿ ಉರ್ದು ಶಿಕ್ಷಕರಿಗೆ ವಿಚಾರಗೋಷ್ಠಿ | ಅಕ್ಟೋಬರ್ 2010 |
| 7. | ಅಲ್ಪಸಂಖ್ಯಾತ ಮಕ್ಕಳಿಗೆ ಹೈಕ್ಸ್ ಮತ್ತು ಕ್ಷೇತ್ರ ಭೇಟಿ | ನವೆಂಬರ್ 2010 |
| 8. | ಲರ್ನಿಂಗ್ ಕಾರ್ನರ್ಸ್ | ಸೆಪ್ಟಂಬರ್ 2010 |
| 9. | ಕೊಡಗು ಜಿಲ್ಲೆಯಲ್ಲಿ Rain Coats, Shoes & Jerkin ಗಳನ್ನು | ಜೂನ್ 2010 |
| 10 | ಇತರೆ ಚಟುವಟಿಕೆಗಳು:<br>1. ಬಡತನ ರೇಖೆಗಿಂತ ಕೆಳಗಿರುವ 5 ಮತ್ತು 7ನೇ ತರಗತಿಯ ಆಯ್ದ ಮಕ್ಕಳಿಗೆ ನಿಘಂಟುಗಳ ಸರಬರಾಜು<br>2. ಆಯ್ದ ಶಾಲೆಗಳಿಗೆ ವಿಜ್ಞಾನ ಉಪಕರಣಗಳನ್ನು ಸರಬರಾಜು ಮಾಡುವುದು. | ಸೆಪ್ಟಂಬರ್ 2010 ಒಳಗೆ |

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

ಪ್ರತಿಯನ್ನು ಕ್ರಮಕ್ಕಾಗಿ:

1. ರಾಜ್ಯದ ಎಲ್ಲಾ ಡಿ.ಡಿ.ಪಿ.ಐ. ಗಳಿಗೆ
2. ರಾಜ್ಯದ ಎಲ್ಲಾ ಡಯಟ್ ಪ್ರಿನ್ಸಿಪಾಲರಿಗೆ ಮುಂದಿನ ಕ್ರಮಕ್ಕೆ.
3. ರಾಜ್ಯದ ಎಲ್ಲಾ ಡಿ.ವೈ.ಪಿ.ಸಿಯವರಿಗೆ ಮುಂದಿನ ಕ್ರಮಕ್ಕೆ.
4. ರಾಜ್ಯದ ಎಲ್ಲಾ ಬಿಇಓ/ಬಿಆರ್‌ಸಿ ಗಳಿಗೆ ಮುಂದಿನ ಕ್ರಮಕ್ಕೆ. ನಿಮ್ಮ ವ್ಯಾಪ್ತಿಯ ಎಲ್ಲಾ ಕ್ಲಸ್ಟರ್ ಪ್ರೌಢಶಾಲೆ ಮುಖ್ಯಸ್ಥರಿಗೆ ಮತ್ತು ಸಿ.ಆರ್.ಪಿಯವರಿಗೆ ಈ ಪತ್ರದ ಪ್ರತಿಗಳನ್ನು ಕಳುಹಿಸುವುದು.
5. ಈ ಕಛೇರಿಯ ಅಧಿಕಾರಿಗಳಿಗೆ ಮುಂದಿನ ಕ್ರಮಕ್ಕೆ.
6. ಲೆಕ್ಕ ಶಾಖೆ ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
7. ಜಿಲ್ಲಾ ಕಾರ್ಯಕ್ರಮ ಅಧಿಕಾರಿಗಳು ಮಹಿಳಾ ಸಮಾಖ್ಯ ಬಾಗಲಕೋಟೆ, ಬಳ್ಳಾರಿ, ಬೀದರ್, ಬಿಜಾಪುರ, ಕೊಪ್ಪಳ, ರಾಯಚೂರು ಗುಲ್ಬರ್ಗಾ.

**ಇವರ ಅವಗಾಹನೆಗಾಗಿ ಸಲ್ಲಿಸಿದೆ :**

1. ಮಾನ್ಯ ಪ್ರಧಾನ ಕಾರ್ಯದರ್ಶಿಯವರು,(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಬಹುಮಹಡಿ ಕಟ್ಟಡ, ಡಾ|| ಅಂಬೇಡ್ಕರ್ ರಸ್ತೆ, ಬೆಂಗಳೂರು.
2. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ ಬೆಂಗಳೂರು.

**ಇವರಿಗೆ ಮಾಹಿತಿಗೆ ಕಳುಹಿಸಿದೆ :**

1. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಧಾರವಾಡ.
2. ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ ; ಪ್ರೌಢಶಿಕ್ಷಣ ; ಡಿಎಸ್‌ಇಆರ್‌ಟಿ, ಅಲ್ಪಸಂಖ್ಯಾತ ಭಾಷೆಗಳು ; ಧಾರಾವಾಡ ; ಗುಲ್ಬರ್ಗಾ.
3. ನಿರ್ದೇಶಕರು ಕೆ.ಎಸ್.ಇ.ಟಿ. ಬೆಂಗಳೂರು ಇವರಿಗೆ ಕಳುಹಿಸಿದೆ ಕೂಡಲೇ ಪುಸ್ತಕಗಳನ್ನು ಮುದ್ರಿಸಿ ಹಂಚುವುದು ಹಾಗೂ ಎಂ.ಆರ್.ಪಿಗಳಿಗೆ ತರಬೇತಿಯನ್ನು ಆಯೋಜಿಸಲು ಸೂಚಿಸಿದೆ.
4. ಸಹ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ,
   [ಬೆಂಗಳೂರು ;ಬೆಳಗಾವಿ ;ಗುಲ್ಬರ್ಗಾ ;ಮೈಸೂರು ;(ವಿಭಾಗೀಯ ಕಛೇರಿಗಳು)- ಚಿತ್ರದುರ್ಗ ;ಮೈಸೂರು ;ಮಂಗಳೂರು ;ಬೆಳಗಾವಿ ; ಜಮಖಂಡಿ ;ಗುಲ್ಬರ್ಗಾ ;(ಶಿಕ್ಷಕರ ಸರ್ಕಾರಿ ಶಿಕ್ಷಣ ಕಾಲೇಜುಗಳ ಪ್ರಿನ್ಸಿಪಾಲರು)-ಶಾಲಾ ಶಿಕ್ಷಣ, ಸಿಪಿಐ ಕಛೇರಿ ಬೆಂಗಳೂರು ; ಎಪಿಸಿಐ ಕಛೇರಿ ಗುಲ್ಬರ್ಗಾ ; ಎಪಿಸಿಐ ಕಛೇರಿ ಧಾರವಾಡ ; ಮಧ್ಯಾಹ್ನ ಉಪಹಾರ ಯೋಜನೆ ಬೆಂಗಳೂರು.]

## ನಾವಿನ್ಯಯುತ ಚಟುವಟಿಕೆ – ಅಲ್ಪಸಂಖ್ಯಾತ ಶಿಕ್ಷಣ ವಿಭಾಗ
## ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ

2010–11 ನೇ ಸಾಲಿನಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸಂಬಂಧಿಸಿದಂತೆ ನಾವಿನ್ಯಯುತ ಚಟುವಟಿಕೆಗಳ ಭೌತಿಕ ಮತ್ತು ಆರ್ಥಿಕ ಪ್ರಗತಿ ನಮೂನೆ-ಎ

ಜಿಲ್ಲೆಯ ಹೆಸರು :

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಚಟುವಟಿಕೆಗಳು | 2010–11 ನೇ ಸಾಲಿನ ಗುರಿ | | ಪ್ರಗತಿ | | ತಾಲ್ಲೂಕುವಾರು ಪ್ರಗತಿ ವಿವರ | |
|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಜಿಲ್ಲೆಯಲ್ಲಿರುವ ಬ್ಲಾಕ್‌ಗಳ ಸಂಖ್ಯೆ | ಈಗಾಗಲೇ ಕಾರ್ಯಕ್ರಮವನ್ನು ಅನುಷ್ಠಾನ ಗೊಳಿಸಿದ ಬ್ಲಾಕ್ ಗಳ ಸಂಖ್ಯೆ |
| 1 | ಮುಸ್ಲಿಂ ಧಾರ್ಮಿಕ ಹಾಗೂ ಸಮುದಾಯದ ಮುಖಂಡರಿಗೆ ಜಾಗೃತಿ ಶಿಬಿರ | | | | | | |
| 2 | ಮುಸ್ಲಿಂ ಮಕ್ಕಳ ತಾಯಂದಿರಿಗೆ ಜಾಗೃತಿ ಶಿಬಿರಗಳು | | | | | | |
| 3 | ಮುಸ್ಲಿಂ ಮಕ್ಕಳ ತಂದೆಯವರಿಗೆ ಜಾಗೃತಿ ಶಿಬಿರಗಳು | | | | | | |
| 4 | ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತ ಮಕ್ಕಳಿಗೆ ಬ್ಲಾಕ್ ಮಟ್ಟದಲ್ಲಿ ವಿಚಾರಗೋಷ್ಠಿ | | | | | | |
| 5 | ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತ ಮಕ್ಕಳಿಗೆ ಬ್ಲಾಕ್ ಮಟ್ಟದಲ್ಲಿ ಮೇಳಗಳು | | | | | | |
| 6 | ಜಿಲ್ಲಾ ಮಟ್ಟದಲ್ಲಿ ಉರ್ದು ಶಿಕ್ಷಕರಿಗೆ ವಿಚಾರಗೋಷ್ಠಿ | | | | | | |
| 7 | ಅಲ್ಪಸಂಖ್ಯಾತ ಮಕ್ಕಳಿಗೆ ಹೈಕ್ಸ್ ಮತ್ತು ಕ್ಷೇತ್ರ ಭೇಟಿ | | | | | | |
| 8 | ಲರ್ನಿಂಗ್ ಕಾರ್ನರ್ಸ್ | | | | | | |
| | ಇತರೆ ಚಟುವಟಿಕೆಗಳು: | | | | | | |
| | 1. ಬಡತನ ರೇಖೆಗಿಂತ ಕೆಳಗಿರುವ 5ನೇ ತರಗತಿಯ ಆಯ್ದ ಮಕ್ಕಳಿಗೆ ನಿಘಂಟನ್ನು ಸರಬರಾಜು | | | | | | |
| | 2. ಆಯ್ದ ಶಾಲೆಗಳಿಗೆ ವಿಜ್ಞಾನ ಉಪಕರಣಗಳನ್ನುಸರಬರಾಜು ಮಾಡುವುದು. | | | | | | |
| | 3. ಕೊಡಗು ಜಿಲ್ಲೆಯಲ್ಲಿ Rain Coats, Shoes & Jerkin ಗಳನ್ನು ಜೂನ್ 15 ರೊಳಗೆ ವಿತರಿಸುವುದು. | | | | | | |
| ಒಟ್ಟು | | | | | | | |

ಸಹಿ

ಜಿಲ್ಲಾ ಯೋಜನಾಧಿಕಾರಿಗಳು
ಹಾಗೂ ಉಪನಿರ್ದೇಶಕರು
(ಆಡಳಿತ) ಸರ್ವ ಶಿಕ್ಷಣ
ಅಭಿಯಾನ...ಜಿಲ್ಲೆ

## ನಾವಿನ್ಯಯುತ ಚಟುವಟಿಕೆ – ಅಲ್ಪಸಂಖ್ಯಾತ ಶಿಕ್ಷಣ ವಿಭಾಗ
## ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ
### 2010-11 ನೇ ಸಾಲಿನಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಚಟುವಟಿಕೆವಾರು ಪ್ರಗತಿ ವರದಿ ನಮೂನೆ-ಬಿ

(ರೂ.ಲಕ್ಷಗಳಲ್ಲಿ)

ಜಿಲ್ಲೆಯ ಹೆಸರು :

| ಕ್ರ.ಸಂ | ಚಟುವಟಿಕೆಗಳು | 2010-11ನೇ ಸಾಲಿನ ಗುರಿ | | ಜಿಲ್ಲೆಗಳಿಂದ ಕ್ಷೇತ್ರಗಳಿಗೆ ಬಿಡುಗಡೆಯಾಗಿರುವ ಅನುದಾನ | | ಬ್ಲಾಕಿನಲ್ಲಿ ಈ ತಿಂಗಳಿನಲ್ಲಿ ಆಗಿರುವ ಪ್ರಗತಿ | | ಬ್ಲಾಕಿನಲ್ಲಿ ಹಿಂದಿನ ಮಾಹೆಯವರೆಗೆ ಆಗಿರುವ ಪ್ರಗತಿ | | ಜಿಲ್ಲಾ ಮಟ್ಟದಲ್ಲಿ ಈ ಚಟುವಟಿಕೆಯಲ್ಲಿ ಖರ್ಚುಮಾಡಿದ್ದಲ್ಲಿ ವಿವರ | | ಒಟ್ಟು ಪ್ರಗತಿ (ಜಿಲ್ಲೆ+ಬ್ಲಾಕ್) | | ಷರಾ |
|---|---|---|---|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | |
| 1 | ಮುಸ್ಲಿಂ ಧಾರ್ಮಿಕ ಹಾಗೂ ಸಮುದಾಯದ ಮುಖಂಡರಿಗೆ ಜಾಗೃತಿ ಶಿಬಿರ | | | | | | | | | | | | | |
| 2 | ಮುಸ್ಲಿಂ ಮಕ್ಕಳ ತಾಯಂದಿರಿಗೆ ಜಾಗೃತಿ ಶಿಬಿರಗಳು | | | | | | | | | | | | | |
| 3 | ಮುಸ್ಲಿಂ ಮಕ್ಕಳ ತಂದೆಯವರಿಗೆ ಜಾಗೃತಿ ಶಿಬಿರಗಳು | | | | | | | | | | | | | |
| 4 | ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತ ಮಕ್ಕಳಿಗೆ ಬ್ಲಾಕ್ ಮಟ್ಟದಲ್ಲಿ ವಿಚಾರಗೋಷ್ಠಿ | | | | | | | | | | | | | |
| 5 | ಶೈಕ್ಷಣಿಕವಾಗಿ ಹಿಂದುಳಿದ ಅಲ್ಪಸಂಖ್ಯಾತ ಮಕ್ಕಳಿಗೆ ಬ್ಲಾಕ್ ಮಟ್ಟದಲ್ಲಿ ಮೇಳಗಳು | | | | | | | | | | | | | |
| 6 | ಜಿಲ್ಲಾ ಮಟ್ಟದಲ್ಲಿ ಉರ್ದು ಶಿಕ್ಷಕರಿಗೆ ವಿಚಾರಗೋಷ್ಠಿ | | | | | | | | | | | | | |
| 7 | ಅಲ್ಪಸಂಖ್ಯಾತ ಮಕ್ಕಳಿಗೆ ಹೈಕ್ಸ್ ಮತ್ತು ಕ್ಷೇತ್ರ ಭೇಟಿ | | | | | | | | | | | | | |
| 8 | ಲರ್ನಿಂಗ್ ಕಾರ್ನರ್ಸ್ | | | | | | | | | | | | | |
| 9 | ಇತರೆ ಚಟುವಟಿಕೆಗಳು: | | | | | | | | | | | | | |
| | 1. ಬಡತನ ರೇಖೆಗಿಂತ ಕೆಳಗಿರುವ 5ನೇ ಮತ್ತು 7ನೇ ತರಗತಿಯ ಆಯ್ದ ಮಕ್ಕಳಿಗೆ ನಿಘಂಟನ್ನು ಸರಬರಾಜು | | | | | | | | | | | | | |
| | 2. ಆಯ್ದ ಶಾಲೆಗಳಿಗೆ ವಿಜ್ಞಾನ ಉಪಕರಣಗಳನ್ನುಸರಬರಾಜು ಮಾಡುವುದು. | | | | | | | | | | | | | |
| | 3. ಕೊಡಗು ಜಿಲ್ಲೆಯಲ್ಲಿ Rain Coats, Shoes & Jerkin ಗಳನ್ನು ಜೂನ್ 15 ರೊಳಗೆ ವಿತರಿಸುವುದು. | | | | | | | | | | | | | |

ಸಹಿ

ಜಿಲ್ಲಾ ಯೋಜನಾಧಿಕಾರಿಗಳು ಹಾಗೂ
ಉಪನಿರ್ದೇಶಕರು (ಆಡಳಿತ) ಸರ್ವ ಶಿಕ್ಷಣ
ಅಭಿಯಾನ...ಜಿಲ್ಲೆ